ಆಗ ಲಿಂಗದೇವನು ಮಾನವರೂಪ ಧರಿಸಿ, ಚಂದಯ್ಯನನ್ನು ಪರಿಪರಿಯಾಗಿ ಬೇಡಿಕೊಳ್ಳುತ್ತಾನೆ. ಅದನ್ನು ಲೆಕ್ಕಿಸದೆ ಚಂದಯ್ಯ ಮುಂದಕ್ಕೆ ಹೋಗುತ್ತಲೇ ಇದ್ದ. ಇದರಿಂದ ಲಿಂಗದೇವನಿಗೆ ಚಿಂತೆಯಾಯಿತು. "ಅಯ್ಯಾ ಚಂದಯ್ಯ, ನನ್ನನ್ನು ಬಿಟ್ಟು ಹೋಗಬೇಡ!" ಎಂದು ಪುನಃ ಪುನಃ ಪ್ರಾರ್ಥಿಸುತ್ತಾನೆ. "ನಾನು ಹೋಗೆನ್ನದೆ ಹೋಗಿರುವ ನಿನ್ನನ್ನು ಮರಳಿ ಸ್ವೀಕರಿಸಲಾರೆ" ಎಂದು ಚಂದಯ್ಯ ಹೇಳುತ್ತಾನೆ.

ಮಾರ್ಗಮಧ್ಯದಲ್ಲಿ ಮಡಿವಾಳ ಮಾಚಯ್ಯನವರು ಶರಣರ ಬಟ್ಟೆಗಳನ್ನು ಮಡಿಮಾಡುವ ಕಾಯಕದಲ್ಲಿ ತೊಡಗಿರುತ್ತಾರೆ. ಅವರು ಚೆಂದಯ್ಯ ಮತ್ತು ಲಿಂಗದೇವರ ನಡುವೆ ಮಧ್ಯಸ್ಥಿಕೆ ಮಾಡುತ್ತಾರೆ. ಅವರ ಮುಂದೆ, "ಕಾಯಕದಲ್ಲಿ ನೆರವಾಗುವುದಾದರೆ ಮನೆಗೆ ಬರಲಿ" ಎಂದು ಚೆಂದಯ್ಯ ಹೇಳುತ್ತಾನೆ. ಲಿಂಗದೇವನು ಅದಕ್ಕೆ ಒಪ್ಪಿಕೊಂಡು, ಚಂದಯ್ಯನಿಗೆ ಸಹಾಯಕನಾಗುತ್ತಾನೆ.

ಒಂದು ದಿನ ಚಂದಯ್ಯನು ಲಿಂಗದೇವನ ತಲೆಯ ಮೇಲೆ ಹಗ್ಗ, ಕಣ್ಣಿ, ಕುಣಿಕೆಗಳನ್ನು ಹೊರಿಸಿ ಮಾರಾಟ ಮಾಡಿಕೊಂಡು ಬರಲು ಕಳಿಸುತ್ತಾನೆ. ಲಿಂಗದೇವನು ಅವೆಲ್ಲವುಗಳನ್ನೂ ಬಸವಣ್ಣನವರಿಗೆ ಕೊಟ್ಟು ಅದರ ಬೆಲೆಗಿಂತ ಒಂದು ಸಾವಿರ ಹೊನ್ನನ್ನು ಹೆಚ್ಚಿಗೆ ಪಡೆದು ಹುಮ್ಮಸ್ಸಿನಿಂದ ಚಂದಯ್ಯನವರಿಗೆ ತಂದುಕೊಡುವನು. ಇದನ್ನು ಕಂಡ ಚಂದಯ್ಯ, "ಇದು ಕಾಯಕದ ನೀತಿ ಅಲ್ಲ, ನನ್ನ ಹಗ್ಗ ಕಣ್ಣಿಗಳ ಬೆಲೆ ಒಂದು 'ಹಾಗ' (ಎರಡು ಕಾಸು) ಮಾತ್ರ, ಹೆಚ್ಚಿನ ಹೊನ್ನನ್ನು ಯಾರಿಂದ ತಂದೆಯೋ ಅವರಿಗೆ ಮರಳಿಸಿ ಬಾ" ಎಂದು ಹೇಳಿ ಕಳಿಸುವನು. ಲಿಂಗದೇವನು ಖಿನ್ನನಾಗಿ ಬಂದು ಇದನ್ನು ಬಸವಣ್ಣನವರಿಗೆ ಒಪ್ಪಿಸಿಬಿಡುವನು. ಇಷ್ಟಕ್ಕೆ ಚಂದಯ್ಯ ಸುಮ್ಮನಿರದೆ, ಲಿಂಗದೇವನ ಸಮೇತನಾಗಿ ಶಿವಾನುಭವಮಂಟಪಕ್ಕೆ ಬಂದು ವೃತ್ತಾಂತವನ್ನೆಲ್ಲ ತಿಳಿಸಿ, "ನನಗೆ ಲಿಂಗದೇವನ ಆವಶ್ಯಕತೆಯಿಲ್ಲ. **ಗುರು ಲಿಂಗ ಜಂಗಮ** – ಈ ಮೂರು ತತ್ತ್ವಗಳು ಜಂಗಮದಲ್ಲಿರುವಾಗ ಘನವಾದ ಜಂಗಮ ದಾಸೋಹವನ್ನೇ ಮಾಡಿಕೊಂಡಿರುತ್ತೇನೆ" ಎಂದು ಸಾರುತ್ತಾನೆ. ಮಹಾನುಭಾವಿ ಅಲ್ಲಮಪ್ರಭುಗಳು, ಅಣ್ಣ ಬಸವಣ್ಣನವರು, ಚನ್ನಬಸವಣ್ಣಾದಿಗಳು ಸಕಲ ಶರಣ, ಶರಣೆಯರೆಲ್ಲರೂ ಸೇರಿ ಚಂದಯ್ಯನ ಅಭಿಪ್ರಾಯವನ್ನು ಮನ್ನಿಸದೆ, ಲಿಂಗವಿರುವವರೆಗೆ 'ಲಿಂಗ' ಪೂಜೆಯನ್ನು ಮಾಡಲೇಬೇಕು; ರತ್ನಕ್ಕೆ ತನ್ನದೇ ಆದ ವೈಶಿಷ್ಟ್ಯವಿದ್ದರೂ ಅದು ಕುಂದಣದಲ್ಲಿ (ಚಿನ್ನ) ಸಂಧಿಸಿರುವಂತೆ, ಭಕ್ತನು ಲಿಂಗದಲ್ಲಿ ಸಂಧಿಸಿರಬೇಕು. ಲಿಂಗಜಂಗಮಗಳು ಪರಸ್ಪರಾವಲಂಬಿಗಳು. ಗುರುವಿಗೂ ಲಿಂಗ, ಜಂಗಮಕ್ಕೂ ಲಿಂಗ, ಭಕ್ತನಿಗೂ ಲಿಂಗ – ಹೀಗೆ ಲಿಂಗಸಾಂಗತ್ಯವಿಲ್ಲದೆ ಯಾರೂ ಏನನ್ನೂ ಸಾಧಿಸಲಾಗದು ಎಂದು ಮನವರಿಕೆ ಮಾಡಿಕೊಡುತ್ತಾರೆ.

ಅಲ್ಲದೆ ಅಲ್ಲಮಪ್ರಭುಗಳ ಸೂಚನೆಯಂತೆ, ಚನ್ನಬಸವಣ್ಣನು ಇಷ್ಟಲಿಂಗ ಮತ್ತು ಜಂಗಮ ಸಂಬಂಧವನ್ನು ಮಾರ್ಮಿಕವಾಗಿ ಹೀಗೆ ನುಲಿಯ ಚಂದಯ್ಯನಿಗೆ ತೋರಿಸಿಕೊಡುತ್ತಾನೆ:

> **ಶ್ರೀಗುರು ಕರುಣವೆ ಲಿಂಗ; ಲಿಂಗದ ನಿಜವೆ ಜಂಗಮ. ಇಂತು ಇದು ಬಹಿರಂಗದ ವರ್ತನೆ. ಇನ್ನು ಅಂತರಂಗದ ಸುಜ್ಞಾನವೇ ಜಂಗಮ. ಆ ಜಂಗಮದ ನಡೆಯೆ ಸತ್ಕ್ರಿಯೆ ಲಿಂಗ. ಈ ಉಭಯ ಏಕತ್ವಸಿದ್ಧಿಯೇ ಗುರು. ಇದು ಕಾರಣ ಅಂಗತ್ರಯದಲ್ಲಿ ಲಿಂಗತ್ರಯ ಸಂಬಂಧವಾದಲ್ಲಿ ಜಂಗಮದಾಸೋಹ. ಜಂಗಮದಾಸೋಹವಿಲ್ಲದಡೆ ಲಿಂಗತೃಪ್ತಿ ಇಲ್ಲ. ಅಂಗದ ಮೇಲೆ ಲಿಂಗವಿಲ್ಲದಿರ್ದಡೆ ಜಂಗಮಸೇವೆಯ ಕೈಕೊಳ್ಳ. ಅದು ಕಾರಣ ಒಂದು ಬಿಟ್ಟು ಒಂದರಲ್ಲಿ ನಿಂದರೆ, ಅಂಗವಿಲ್ಲದ ಆತ್ಮನಂತೆ, ಶಕ್ತಿಯು ಇಲ್ಲದ ಶಿವನಂತೆ, ದೀಪವಿಲ್ಲದ ಪ್ರಕಾಶದಂತೆ ಬಂದಾಗ ಶೂನ್ಯವಾಗಿ ಭಕ್ತಿಯುಂಟೆ? ಅವಯವಹೀನನು ರಾಯಪಟ್ಟಣಕ್ಕೆ ಸಲ್ಲುವನೆ? ಅದು ದೇವತ್ವಕ್ಕೆ ಸಲ್ಲದು.** (ಆಧಾರ:– *ಷಟ್‌ಸ್ಥಲಬ್ರಹ್ಮಿ ಚನ್ನಬಸವಣ್ಣ*, ಪುಟ ೨೩)

ಎಲ್ಲರ ಸಲಹೆಗೆ ಮನ್ನಣೆಯಿತ್ತು ಎಲ್ಲವೂ ಶಿವಮಯವೆಂದು ಬಗೆದು ಚಂದಯ್ಯ ಪುನಃ ಲಿಂಗ ಧರಿಸಿಕೊಳ್ಳುವನು. ನುಲಿಯ ಕಾಯಕವನ್ನೇ ಮುಂದುವರಿಸುತ್ತ ಇಂದಿನ ತರೀಕೆರೆ ತಾಲೋಕಿನ ನಂದಿ ಎಂಬ ಗ್ರಾಮಕ್ಕೆ ಬಂದು ನೆಲೆಸುವನು. ಕ್ರಿ.ಶ. ೧೧೮೨ ನೇ ಇಸವಿಯಲ್ಲಿ ಪದ್ಮಾವತಿ ಎಂಬ ಗ್ರಾಮಕ್ಕೆ (ಇಂದಿನ ಹೊಳಲ್ಕೆರೆ ತಾಲೂಕಿನ ನುಲೇನೂರು) ಬಂದು ಅಲ್ಲಿ ಧರ್ಮಪ್ರಚಾರಮಾಡಿ, ಪುನಃ ನಂದಿಗೆ ಮರಳಿ ಹಲವಾರು ಪವಾಡಗಳನ್ನು ಮಾಡಿ, ಲಿಂಗೈಕ್ಯನಾದನೆಂದು ಅಲ್ಲಿಯ ಎರಡು ಶಾಸನಗಳು ಹೇಳುತ್ತವೆ.

# ಕೃತ್ತಿವಾಸ ರಾಮಾಯಣ

ಸ್ವಾಮಿ ಕರುಣಾಕರಾನಂದ

*(ಹಿಂದಿನ ಸಂಚಿಕೆಯಿಂದ)*

## ಕೆಲವು ರಸಪ್ರಸಂಗಗಳು

ಕೃತ್ತಿವಾಸನ ರಾಮಾಯಣದುದ್ದಕ್ಕೂ ಬರುವ ಕೆಲವು ಪ್ರಸಂಗಗಳು ಓದುಗರ ಮನಸ್ಸನ್ನು ಸೆರೆ ಹಿಡಿದಿಡುತ್ತವೆ. ಅಂತಹ ಸನ್ನಿವೇಶಗಳ ಮೂಲಕ ಕವಿ ಯಾವುದೊ ಒಂದು ಸಂದೇಶವನ್ನು ಓದುಗರ ಹೃದಯಕ್ಕೆ ಮುಟ್ಟಿಸುವ ಶೈಲಿ ಅದ್ಭುತ. ಆದಿಕಾಂಡದಲ್ಲಿ ದಶರಥನ ಆಖ್ಯಾನದಲ್ಲಿ ಬರುವ ಪ್ರಸಂಗವಿದು. ದಶರಥನು ಅಂಧಕ ಮುನಿಯ ಪುತ್ರನಾದ ಸಿಂಧುವೆಂಬ ಮುನಿಯನ್ನು ತನಗೆ ಅರಿವಿಲ್ಲದೆಯೇ ಶಬ್ದವೇಧಿ ಬಾಣವನ್ನು ಬಿಡುವ ಮೂಲಕ ಕೊಂದಿದ್ದಾನೆ. ಶವವನ್ನು ತನ್ನ ಹೆಗಲ ಮೇಲಿಟ್ಟುಕೊಂಡು ಋಷಿದಂಪತಿಗಳ ಬಳಿಸಾರುತ್ತಾನೆ. ಅವನು ಏನೂ ಹೇಳದಿದ್ದರೂ, ಅಂಧಕ ಮುನಿಗೆ ಧ್ಯಾನದಿಂದಲೇ ಎಲ್ಲವೂ ತಿಳಿದುಬರುತ್ತದೆ. ಆತ ದಶರಥನಿಗೆ ಹೀಗೆ ಶಾಪವನ್ನು ಕೊಡುತ್ತಾನೆ:

**ಆರ್ ಕಿವಾ ದಶರಥ್, ಶಾಪಿಬೊ ತೋಮಾಕೇ। ಏಇ ಮತ್ ತೋರ್ ಪ್ರಾಣ್ ಜಾಬೇ ಪುತ್ರಶೋಕೇ॥ ಪುತ್ರಶೋಕೇ ಮರಿಬೊ ಆಮರಾ ದುಇ ಪ್ರಾಣೀ। ಪುತ್ರಶೋಕ್ ಜೇ ಜಂತ್ರಣಾ ಜಾನಿಬೇ ಆಪನಿ॥**



"ಹೇ ದಶರಥ, ಯಾವ ರೀತಿ ನಾವಿಬ್ಬರೂ ದಂಪತಿಗಳು ಪುತ್ರಶೋಕದಿಂದ ಪ್ರಾಣವನ್ನು ತ್ಯಜಿಸುವಂತಾಯಿತೋ, ಅದೇ ರೀತಿ ನೀನೂ ಪುತ್ರಶೋಕದಿಂದ ಪ್ರಾಣ ಕಳೆದುಕೊಳ್ಳುವಂತಾಗುತ್ತದೆ. ನಿನಗೂ ಪುತ್ರಶೋಕವೆಂದರೆ ಏನೆಂಬುದರ ಅರಿವಾಗುತ್ತದೆ."

ಹೀಗೆ ಮುನಿಯು ಶಪಿಸುತ್ತಾನೆ. ಇದರಿಂದ ದಶರಥನಿಗೆ ಒಳಗೊಳಗೇ ಸಂತೋಷವಾಯಿತು! ಆತ ಮುನಿಗೆ ಹೇಳುತ್ತಾನೆ, "ಮುನಿಗಳಾದ ನೀವು ವಿಷ್ಣುವಿನಂತೆ ತೇಜಸ್ವಿಗಳು. ನಿಮ್ಮ ವಾಕ್ಯ ಸತ್ಯವಾಗಲೇಬೇಕು. ಮುನಿವಾಕ್ಯ ನನಗೆ ಒಳ್ಳೆಯದನ್ನೇ ಮಾಡಿದೆ. ಪ್ರಾಣ ಹೋದರೂ ಚಿಂತೆಯಿಲ್ಲ. ಪುತ್ರನ ಮುಖ ನೋಡಿದ ಮೇಲಾದರೂ ಹೋಗಲಿ. ಹೇ ಮುನಿ, ನಿನ್ನ ಶಾಪದಿಂದ ನನ್ನೊಳಗೆ ಆನಂದವುಂಟಾಗುತ್ತಿದೆ. ನೀನು ಕೊಟ್ಟದ್ದು ಶಾಪವಲ್ಲ, ಪುತ್ರಪ್ರಾಪ್ತಿಯಾಗಲೆಂಬ ವರ!" ಇದರಲ್ಲಿ ನಾವು ಎರಡೂ ರೀತಿಯ ನೋವನ್ನು ನೋಡಬಹುದು. ಅಂಧಕ ಋಷಿಗೆ ಮಗನು ಸತ್ತ ದುಃಖವಾದರೆ, ದಶರಥನಿಗೆ ತನಗೆ ಮಕ್ಕಳಾಗಲಿಲ್ಲವಲ್ಲ, ತನ್ನ ಉತ್ತರಾಧಿಕಾರಿ ಯಾರು ಎಂಬ ಚಿಂತೆಯಿಂದ ದುಃಖ. ಆದ್ದರಿಂದ ಈಗ ಋಷಿಯು ಪುತ್ರಶೋಕದಿಂದ ಮೃತ್ಯುವಾಗುವುದೆಂದು ಶಪಿಸಿದಾಗ, ದಶರಥನಿಗೆ ಆನಂದವೇ ಉಂಟಾಗುತ್ತದೆ. ದಶರಥನು ಋಷಿಯ ಬಳಿ ಬರುವಾಗ ಎಂತಹ ಭಯವಿದ್ದಿರಬಹುದು, ಅವನ ಹೃದಯದಲ್ಲಿ! ಅಂತಹ ಭಯದ ನಡುವೆಯೂ ಈ ಶಾಪದ ಮಾತನ್ನು ಕೇಳಿದಾಗ ಅವನಿಗೆ ಸಂತೋಷವೇ ಆಯಿತು. ಆ ಶಾಪದಿಂದ ತಾನು ಸಾಯುವ ಭಯಕ್ಕಿಂತ, ತನಗೆ ಮಗನೊಬ್ಬ ಹುಟ್ಟುತ್ತಾನೆಂಬ ಆನಂದವೇ ಅವನನ್ನು ಆವರಿಸಿತು. ಪುತ್ರವಿರಹಕ್ಕೆ ಮುನ್ನ ಪುತ್ರಪ್ರಾಪ್ತಿಯಾಗಲೇಬೇಕಲ್ಲ! ಅದೂ ಈ ಮಾತನ್ನು ಹೇಳಿದ್ದು ಸಾಮಾನ್ಯ ಮನುಷ್ಯನಲ್ಲ, ಆಜೀವಪರ್ಯಂತ ಸತ್ಯವನ್ನೇ ಅನುಷ್ಠಾನ ಮಾಡಿಕೊಂಡು ಬಂದ ಋಷಿ. ಅವನ ಮಾತು ಹೇಗೆ ಸುಳ್ಳಾದೀತು ಎಂಬ ಅಚಲ ವಿಶ್ವಾಸವೇ ದಶರಥನಲ್ಲಿ ಸಂತೋಷವನ್ನು ಉಂಟುಮಾಡಿತು. ಕೃತ್ತಿವಾಸನಿಗೆ ಸ್ವತಃ ಸಂತಾನವಿರಲಿಲ್ಲ. ಹಾಗಾಗಿ ತನ್ನ ಸ್ವಂತ ನೋವಿನ ಧ್ವನಿಯನ್ನೇ ದಶರಥನ ಮೂಲಕ ಬಿಂಬಿಸಿದ್ದಾನೆ.

## ನಾಮದ ಮಹಿಮೆ

ದಶರಥನು ಮುನಿ ಕುಮಾರನ ಹತ್ಯಾಪಾಪದಿಂದ ಭೀತನಾಗಿ ವಸಿಷ್ಠರ ಆಶ್ರಮಕ್ಕೆ ಹೋಗುತ್ತಾನೆ. ಆಗ ವಸಿಷ್ಠರು ಅಲ್ಲಿರುವುದಿಲ್ಲ. ಅವರ ಮಗ ವಾಮದೇವರು ದಶರಥನನ್ನು ಬರಮಾಡಿಕೊಳ್ಳುತ್ತಾರೆ. ದಶರಥನು ತನ್ನ ಪಾಪದಿಂದ ಬಿಡುಗಡೆ ಹೊಂದುವ ಉಪಾಯವನ್ನು ಅವರ ಬಳಿ ಕೇಳಿದಾಗ, ಅಕಾಲಮೃತ್ಯುವಿಗೆ ಯಾವ ಯಜ್ಞ-ದಾನಗಳೂ ಕೆಲಸಕ್ಕೆ ಬರುವುದಿಲ್ಲವೆಂದೂ, ವಾಲ್ಮೀಕಿಯು ಯಾವ ಮಂತ್ರದಿಂದ ಪವಿತ್ರರಾಗಿ ತಮ್ಮ ದುಃಸ್ಥಿತಿಯಿಂದ ಪಾರಾದರೋ, ಆ 'ರಾಮನಾಮ'ವೊಂದೇ ಈಗ ರಾಜನನ್ನು ಉದ್ಧರಿಸುವುದೆಂದೂ ಮನಗಂಡು, ಮೂರು ಬಾರಿ 'ರಾಮನಾಮ'ವನ್ನು ಅವನ ಬಾಯಿಯಿಂದ ಹೇಳಿಸುತ್ತಾರೆ. ಹೀಗೆ ದಶರಥನನ್ನು ಪಾಪದಿಂದ ಮುಕ್ತಗೊಳಿಸುತ್ತಾರೆ. ಸಂಜೆ ವಸಿಷ್ಠರು ಆಶ್ರಮಕ್ಕೆ ಹಿಂತಿರುಗಿದ ಮೇಲೆ ಈ ಎಲ್ಲ ವೃತ್ತಾಂತವನ್ನು ಕೇಳಿ ತಿಳಿದಾಗ ಅವರಿಗೆ ಸಂತೋಷವಾಗುವುದರ ಬದಲು ಅತ್ಯಂತ ಕೋಪವುಂಟಾಗುತ್ತದೆ. ಅವರು 'ರಾಮನಾಮ'ದ ಮಹಿಮೆಯನ್ನು ತನ್ನ ಮಗನಿಗೆ ತಿಳಿಸುತ್ತ ಹೀಗೆ ಶಾಪ ನೀಡುತ್ತಾರೆ: "ಒಂದೇ ಒಂದು ಸಲ

ರಾಮನಾಮವನ್ನು ಉಚ್ಚರಿಸುವುದರಿಂದ ಕೋಟಿ, ಕೋಟಿ ಬ್ರಹ್ಮಹತ್ಯೆಗಳು ನಾಶವಾಗುತ್ತವೆ. ನೀನು ರಾಜನಿಗೆ ಮೂರು ಬಾರಿ ರಾಮನಾಮವನ್ನು ಹೇಳುವಂತೆ ಹೇಳಿದೆ. ನನ್ನ ಮಗನಾಗಿ ನೀನು ದೊಡ್ಡ ಅಜ್ಞಾನಿಯಂತೆ ವರ್ತಿಸಿದೆ. ಚಂಡಾಲನಾಗಿ ಹೋಗು." "ರಾಮನು ಇನ್ನೂ ಜನಿಸಿಯೇ ಇರಲಿಲ್ಲ. ಆದರೂ ಆತನ ನಾಮ ಲೋಕದಲ್ಲಿ ಪ್ರಚಲಿತವಿತ್ತು" ಎಂಬ ನಂಬಿಕೆಯ ಮೇಲೆ ಆಧಾರಿತವಾದ ಈ ಪ್ರಸಂಗದಲ್ಲಿ ಮುಖ್ಯವಾಗಿ ಭಗವದ್ಭಕ್ತರಿಗೆ ಭಗವಂತನ ನಾಮದ ಮಹಿಮೆಯನ್ನು ತಿಳಿಸುವ ಪ್ರಯತ್ನವಿದೆ. "ಭಗವಂತನು ಸಾಕ್ಷಾತ್ತಾಗಿ ಜೀವರನ್ನು ಉದ್ಧರಿಸಲು ಬಾರ ದಿದ್ದರೂ ಆತನ ನಾಮವೊಂದೇ ಆ ಕೆಲಸವನ್ನು ಮಾಡಲು ಶಕ್ತವಾಗಿದೆ" ಎಂಬ ಶ್ರದ್ಧೆಯನ್ನು ಜನರ ಹೃದಯದಲ್ಲಿ ಬಿತ್ತುತ್ತವೆ ಇಂತಹ ಸಾಲುಗಳು!

## ಭಕ್ತಪರಾಧೀನ

ಒಮ್ಮೆ ಒಂದು ಪರ್ವದ ದಿನ ದಶರಥನು ಸಪರಿವಾರನಾಗಿ ಮಹಾಸೈನ್ಯದಿಂದೊಡಗೂಡಿ ಗಂಗಾಸ್ನಾನ ಮಾಡಲು ಹೊರಡುತ್ತಾನೆ. ದಾರಿಯಲ್ಲಿ ಗುಹನೆಂಬ ನಿಷಾಧ ರಾಜನು ದಶರಥನನ್ನು ತಡೆಯುತ್ತಾನೆ. ದಶರಥ ತನ್ನ ಮೂರು ಕೋಟಿ ಸೈನಿಕರೊಂದಿಗೆ ಬಂದಿದ್ದ. ಗುಹ ಹೇಳುತ್ತಾನೆ, "ಹೇ ರಾಜನ್, ನೀವು ಪ್ರತಿ ಬಾರಿಯೂ ಗಂಗಾಸ್ನಾನ ಮಾಡಲು ಹೋಗುವಾಗ ನಿಮ್ಮ ಈ ದೊಡ್ಡ ಸೈನ್ಯದೊಂದಿಗೆ ಹೋಗುತ್ತೀರಿ. ಅದರಿಂದ ನನ್ನ ರಾಜ್ಯವನ್ನು ಹಾಳುಮಾಡುತ್ತೀರಿ. ಒಂದು ವೇಳೆ ನಿಮಗೆ ಗಂಗಾಸ್ನಾನ ಮಾಡಲೇಬೇಕೆಂದಿದ್ದರೆ, ದಯವಿಟ್ಟು ಬೇರೆ ಮಾರ್ಗವಾಗಿ ಹೋಗಿ. ಇದೇ ಮಾರ್ಗದಲ್ಲಿ ತಾವು ಹೋಗಬೇಕೆಂದಿದ್ದರೆ ನನಗೆ ರಾಮನ ದರ್ಶನ ಮಾಡಿಸಿ." ಹೀಗೆ ಹೇಳುತ್ತಲೇ ಆತ, "ರಾಮ, ರಾಮ" ಎಂದು ಆರ್ತನಾಗಿ ಕರೆಯಲಾರಂಭಿಸಿದ. ದಶರಥನು ರಾಮನನ್ನು ರಥದೊಳಗೆ ಅಡಗಿಸಿ, ತಾನೇ ಅವನ ರಕ್ಷಣೆಗಾಗಿ ಬಿಲ್ಲುಬಾಣಗಳನ್ನು ಹಿಡಿದುನಿಂತ. ಆದರೂ, ತಾನು ಇಂತಹ ಬೆಸ್ತನ ಜೊತೆಗೆ ಯುದ್ಧಮಾಡಿ ತನ್ನ ಯಶಸ್ಸನ್ನು ಕಳೆದುಕೊಳ್ಳಬೇಕಾದೀತೆಂಬ ಭಯದಲ್ಲಿದ್ದ. ಕೊನೆಗೆ, ಅವನಿಗೂ ಗುಹನಿಗೂ ಭೀಕರ ಯುದ್ಧ ಶುರುವಾಯಿತು. ಇಬ್ಬರೂ ಒಬ್ಬರ ಮೇಲೊಬ್ಬರು ಬಾಣಗಳ ಸುರಿಮಳೆಗೈದರು. ಕೊನೆಯಲ್ಲಿ ದಶರಥನು, ಪಾಶುಪತಾಸ್ತ್ರದಿಂದ ಗುಹನನ್ನು ಕಟ್ಟಿ ಒಂದು ರಥದಲ್ಲಿ ಹಾಕುತ್ತಾನೆ. ಗುಹನು ತನ್ನ ಪ್ರಯತ್ನ ವಿಫಲವಾದದ್ದನ್ನು ಕಂಡು ದುಃಖಿಸುತ್ತಾ, ತನ್ನ ಕಾಲಿನಿಂದಲೇ ಬಾಣ ಬಿಡಲು ಆರಂಭಿಸುತ್ತಾನೆ. ಭರತನು ಈ ಆಶ್ಚರ್ಯವನ್ನು ಕಂಡು ರಾಮನಿಗೂ ಅದನ್ನು ತೋರಿಸುತ್ತಾನೆ. ಈ ಚಮತ್ಕಾರವನ್ನು ನೋಡಲು ರಥದಿಂದ ಹೊರಬಂದ ರಾಮ ಹೊರಗೆ ಕಾಣಿಸಿಕೊಳ್ಳುತ್ತಾನೆ. ಅವನನ್ನು ನೋಡಿದ ಗುಹನು ಬಿಲ್ಲುಬಾಣಗಳನ್ನು ಬಿಸುಟು ಅಲ್ಲಿಂದಲೇ ಕೈಜೋಡಿಸುತ್ತಾನೆ. ಏಕೆ ಶಸ್ತ್ರ ಪರಿತ್ಯಾಗ ಮಾಡಿದೆಯೆಂದು ರಾಮನು ಗುಹನನ್ನು ಪ್ರಶ್ನಿಸುತ್ತಾನೆ. ಆಗ ಗುಹನು ತನ್ನ ಪೂರ್ವಜನ್ಮದ ಕತೆಯನ್ನು ತಿಳಿಸುತ್ತಾನೆ. ಹಿಂದಿನ ಜನ್ಮದಲ್ಲಿ ದಶರಥನಿಗೆ ಮೂರು ಬಾರಿ ರಾಮನಾಮೋಪದೇಶ ಮಾಡಿ ತನ್ನ ತಂದೆಯಾದ ವಸಿಷ್ಠನಿಂದ ಶಾಪಕ್ಕೆ ಒಳಗಾದ ವಾಮದೇವನೇ ಈಗ ಗುಹನಾಗಿದ್ದಾನೆ. ತನ್ನ ಶಾಪವಿಮೋಚನೆಗಾಗಿ ರಾಮನನ್ನು ಕಾಣುವ ಸಲುವಾಗಿ ಈ ನಾಟಕ ಆಡಬೇಕಾಯಿತೆಂದು ಗುಹನು ಹೇಳುತ್ತಾನೆ. ಹೀಗೆ ಹೇಳುತ್ತ ಹೇಳುತ್ತ ಜೋರಾಗಿ ಅಳಲು ಆರಂಭಿಸುತ್ತಾನೆ. ಅವನ ಅಳುವನ್ನು ಕಂಡು ರಾಮನೂ ಅಳುತ್ತಾನೆ. ಕಡೆಗೆ ರಾಮನು ಅವನನ್ನು ಬಂಧನದಿಂದ ಮುಕ್ತಗೊಳಿಸುತ್ತಾನೆ. ಅಗ್ನಿಯನ್ನು ಪ್ರಜ್ವಲಿಸಬೇಕೆಂದು ಲಕ್ಷ್ಮಣನಿಗೆ ಹೇಳಿ, ಅಗ್ನಿಸಾಕ್ಷಿಯಾಗಿ ಗುಹನೊಂದಿಗೆ ಮೈತ್ರಿಯನ್ನು ಬೆಳೆಸುತ್ತಾನೆ. **ಜೇಯೀ ಆಮಿ ಶೇಯೀ ತುಮಿ ಬೊಲೇನ್ ಶ್ರೀರಾಮ್। ಗುಹ ಬೋಲೇ ಘುಚಾಯಿತೇ ನಾರಿ ನಿಜ ನಾಮ್॥** – "ನಾನೂ ನೀನೂ ಒಂದೇ, ಬೇರೆ ಬೇರೆಯಲ್ಲ. ಇನ್ನು ಮುಂದೆ ನೀನು ಚಂಡಾಲನಲ್ಲ" ಎಂದು ರಾಮನು ಘೋಷಿಸುತ್ತಾನೆ.

## ಜನಕನ ಅರಮನೆಯಲ್ಲಿ ಶಿವಧನುಸ್ಸಿನ ಸ್ಪರ್ಧೆ

ರಾಮನಿಗೆ ಹದಿನೇಳು ವರ್ಷ ವಯಸ್ಸಾಗಿತ್ತು. ಇತ್ತ ಮಿಥಿಲೆಯಲ್ಲಿ ಸೀತೆ ಪರಮಸುಂದರಿಯಾಗಿ ಬೆಳೆಯುತ್ತಿದ್ದಳು. ಸೀತೆಗೆ ಯೋಗ್ಯ ವರನನ್ನು ಹುಡುಕುವಂತೆ ಜನಕನು ರಾಜಪುರೋಹಿತರಿಗೆ ತಿಳಿಸಿದನು. ದೇವಲೋಕದಲ್ಲಿ ಬ್ರಹ್ಮನಾದಿಯಾಗಿ ಎಲ್ಲ ದೇವತೆಗಳಿಗೂ, ಎಲ್ಲಿ ಜನಕನು ಸೀತೆ ಯನ್ನು ರಾಮನಲ್ಲದೆ ಬೇರೆ ಯಾರಿಗಾದರೂ ಕೊಟ್ಟಾನೆಂಬ ಭಯವುಂಟಾಯಿತು. ಅವರೆಲ್ಲರೂ ಶಿವನ ಬಳಿಗೆ ಹೋದರು. ಬ್ರಹ್ಮನು ಶಿವನಿಗೆ, ಜನಕನು ಶಿವನ ಪರಮಭಕ್ತನೆಂದೂ, ಆತನ ಮಗಳು ಸೀತೆಯನ್ನು ರಕ್ಷಿಸುವ ಜವಾಬ್ದಾರಿಯನ್ನು ಹೇಗಾದರೂ ಆತನೇ ವಹಿಸಿಕೊಳ್ಳಬೇಕೆಂದೂ ಕೇಳಿಕೊಂಡನು. ಶಿವನು ಪರಶು ರಾಮನನ್ನು ಕರೆದು, ತನ್ನ ಧನುಸ್ಸನ್ನು ಆತನಿಗೆ ಕೊಡುತ್ತ, ಅದನ್ನು ಜನಕನಿಗೆ ಕೊಟ್ಟು, ಯಾರು ಅದನ್ನು ಮುರಿಯುತ್ತಾರೋ ಅವರಿಗೆ ಮಾತ್ರ ಸೀತೆಯನ್ನು ವಿವಾಹ ಮಾಡಿಕೊಡಬೇಕೆಂದು ಜನಕನಿಗೆ ಹೇಳಬೇಕೆಂದು ಆಜ್ಞೆ ಮಾಡಿದನು.

ಪರಶುರಾಮನು ಜನಕನ ಬಳಿಗೆ ಹೋದಾಗ ಜನಕನು ಅವನಿಗೆ ಅದ್ದೂರಿಯಾದ ಸ್ವಾಗತವನ್ನು ನೀಡಿ ಬಂದ ಕಾರಣವನ್ನು ಕೇಳಲು, ಸೀತೆಯನ್ನು ತನಗೆ ವಿವಾಹದಲ್ಲಿ ಕೊಡಬೇಕೆಂದು ಕೇಳಿದನು. ಜನಕನು ಅದಕ್ಕೆ ಸಂತೋಷದಿಂದ ಸಮ್ಮತಿಯನ್ನು ಕೊಡುತ್ತ, ಸೀತೆಯು ವಿವಾಹಯೋಗ್ಯಳಾದಾಗ ಅವನಿಗೇ ಕೊಡುವುದಾಗಿ ತಿಳಿಸಿದನು. ಅಲ್ಲಿಯವರೆಗೂ ತಾನು ತಪಸ್ಸಿಗೆ ಹೋಗುವುದಾಗಿ ಹೇಳಿ ಪರಶುರಾಮನು ಹೋಗಲು ಅನುವಾಗುತ್ತಾನೆ. ಪರಶುರಾಮನು ವಾಪಸ್ಸು ಬರುವ ಹೊತ್ತಿಗೆ ಸೀತೆಯ ವಿವಾಹಯೋಗ್ಯ ವಯಸ್ಸು ಮೀರಿಹೋದರೆ ಏನು ಮಾಡುವುದು ಎಂಬುದಾಗಿ ಜನಕನು ತನ್ನ ಮನಸ್ಸಿನ ಆತಂಕವನ್ನು ಎದುರಿಗಿಡುತ್ತಾನೆ. ಆಗ ಪರಶುರಾಮನು ಅವನಿಗೆ ಆಶ್ವಾಸನೆಯನ್ನು ನೀಡುತ್ತ, ತಾನು ತಂದಿದ್ದ ಶಿವಧನುಸ್ಸನ್ನು ಜನಕನಿಗೆ ಕೊಡುತ್ತಾನೆ. ಯಾರು ಆ ಧನುಸ್ಸಿಗೆ ಹೆದೆಯನ್ನು

ಕಟ್ಟುವರೊ ಅವರಿಗೆ ಸೀತೆಯನ್ನು ಕೊಡಬೇಕಾಗಿಯೂ, ಅಂತಹ ವ್ಯಕ್ತಿ, ಸೀತೆಯನ್ನು ವಿವಾಹವಾಗಲು ತನಗೆ ಯಾವ ಅಭ್ಯಂತರವೂ ಇಲ್ಲವೆಂದೂ ಹೇಳಿ ಪರಶುರಾಮ ತಪಸ್ಸಿಗೆ ಹೊರಟುಹೋಗುತ್ತಾನೆ.

ಅದೇ ಪ್ರಕಾರ ಸೀತೆ ಪ್ರಾಪ್ತವಯಸ್ಕಳಾದಾಗ ಶಿವಧನುಸ್ಸನ್ನು ಎತ್ತುವ ಸ್ಪರ್ಧೆ ನಡೆಯಿತು. ಸ್ಪರ್ಧೆಯಲ್ಲಿ ಭಾಗವಹಿಸಲು ಭೂಲೋಕದ ಸಮಸ್ತ ರಾಜರೂ ಬಂದರು. ಈ ಪ್ರಸಂಗ ವನ್ನು ಕವಿ ಹಾಸ್ಯಮಿಶ್ರಿತ ಶೈಲಿಯಲ್ಲಿ ಚಿತ್ರಿಸಿದ್ದಾನೆ. ಧನುಸ್ಸನ್ನು ನೋಡನೋಡುತ್ತಲೇ ಅವರೆಲ್ಲರೂ ಹೆದರಿಹೋದರು! ಇನ್ನು ಎಷ್ಟೋ ರಾಜಪುತ್ರರು, ಎಲ್ಲಿ ಧನುಸ್ಸನ್ನು ಎತ್ತಲು ಹೋಗಿ ಸಾಧ್ಯವಾಗದೇ ತಮ್ಮ ಮಾನ ಹೋದೀತೆಂದು ರಾಜಸಭೆಯಿಂದ ಮೆಲ್ಲನೆ ಓಡಿಹೋಗುತ್ತಿದ್ದರು. ಅವರನ್ನು ನೋಡಿದ ಊರ ಮಕ್ಕಳು, ಚಪ್ಪಾಳೆ ತಟ್ಟುತ್ತ ಅವರನ್ನು ಗೇಲಿ ಮಾಡುತ್ತ ಅವರ ಹಿಂದೆ ಹಿಂದೆ ಹೋಗುತ್ತಿದ್ದರು. ಈ ಸ್ಪರ್ಧೆಯ ವಿಷಯ ರಾವಣನಿಗೂ ಗೊತ್ತಾಗಿ ಅವನು ಅಕಂಪನ, ಪ್ರಹಸ್ತ, ಮಾರೀಚ ಹಾಗೂ ಮಹೋದರರೊಂದಿಗೆ ಮಿಥಿಲೆಗೆ ಬಂದನು. ಜನಕನು ಅವನನ್ನು ಸ್ವಾಗತಿಸಿ ಅವನು ಬಂದ ಕಾರಣವನ್ನು ವಿಚಾರಿಸಿದ ಮೇಲೆ, ತಾನು ಸೀತೆಯನ್ನು ವರಿಸಲು ಬಂದೆನೆಂದು ಹೇಳುತ್ತಾನೆ. ಜನಕನು ಸ್ಪರ್ಧೆಯ ವಿಚಾರವೆತ್ತಿದಾಗ ರಾವಣ ತನ್ನ ಹತ್ತೂ ತಲೆಯಿಂದ ನಕ್ಕು ತನಗೆ ಯಾವ ಸ್ಪರ್ಧೆಯೂ ಲೆಕ್ಕಕ್ಕಿಲ್ಲವೆಂದೂ, ಮೊದಲು ಸೀತೆಯನ್ನು ದಾನ ಮಾಡಬೇಕೆಂದೂ, ನಂತರ ಹಿಂತಿರುಗುವಾಗ ತಾನು ಧನುಸ್ಸನ್ನು ಎತ್ತಿ ತೋರಿಸುವೆನೆಂದೂ ಹೇಳುತ್ತಾನೆ. ಆಗ ಜನಕನು ತಾನು ಪರಶುರಾಮನ ಆಜ್ಞೆಯಂತೆ, ಸ್ಪರ್ಧೆಗೆ ಕಟ್ಟುಬಿದ್ದಿರುವೆನೆಂದು ಹೇಳುತ್ತಾನೆ.

ರಾವಣನು ಅಹಂಕಾರದಿಂದ ಧನುಸ್ಸನ್ನಿಟ್ಟಿರುವ ವಿಶಾಲವಾದ ಸಭಾಂಗಣಕ್ಕೆ ಬರುತ್ತಾನೆ. ಅದನ್ನು ನೋಡುತ್ತಲೇ ಅದನ್ನು ಎತ್ತುವ ಬಗ್ಗೆ ಅವನ ಮನಸ್ಸಿನಲ್ಲಿ ಸಂಶಯವುಂಟಾಯಿತು. ಆ ಸಮಯದಲ್ಲಿ ಅವನ ಮುಖವನ್ನು ವರ್ಣಿಸುತ್ತ ಕೃತ್ತಿವಾಸ ಹೇಳುತ್ತಾನೆ, **ಅಂತರೇ ಆತಂಕ್ ಅತಿ, ಮುಖೇ ಆಸ್ಫಾಲನ್** ಎಂದು. ಅಂದರೆ, ಒಳಗೊಳಗೇ ಭಯವಿದ್ದರೂ, ಹೊರಗೆ ಆತ್ಮವಿಶ್ವಾಸದಿಂದ ತುಂಬಿರುವನಂತೆ ಅವನು ಸೋಗು ಹಾಕಿದ್ದ. ತನ್ನ ಇಪ್ಪತ್ತೂ ಕೈಗಳಿಂದ ತನ್ನೆಲ್ಲಾ ಶಕ್ತಿಯನ್ನೂ ಒಗ್ಗೂಡಿಸಿಕೊಂಡು ಧನುಸ್ಸನ್ನು ಎತ್ತಲು ಪ್ರಯತ್ನಿಸಿದ. ಅದು ಅಲುಗಾಡಲೂ ಇಲ್ಲ. ಕೈಬೆರಳನ್ನು ಮೂಗಿನ ಮೇಲಿಟ್ಟುಕೊಂಡು ಆಚೆ ಈಚೆ ನೋಡಿ ಮಾವನಾದ ಪ್ರಹಸ್ತನಿಗೆ ಹೇಳಿದ, "ಮಾವ! ಈ ಧನುಸ್ಸು ಮಿಸುಕಾಡುತ್ತಲೇ ಇಲ್ಲವಲ್ಲ!" ಎಂದು. ಪ್ರಹಸ್ತ ಉತ್ತರಿಸುತ್ತಾನೆ, "ಮಿಥಿಲೆಗೆ ಬಂದಂತೂ ಆಗಿದೆ. ಈಗ ನಮ್ಮ ಮಾನ ಹೋಗುವುದು ಬೇಡ. ನಿನ್ನೆಲ್ಲ ಶಕ್ತಿಯನ್ನೊಗ್ಗೂಡಿಸಿ ಎತ್ತಿಬಿಡು." ರಾವಣ ಕೊನೆಯ ಪ್ರಯತ್ನ ಮಾಡಿ ಸಫಲನಾಗದೆ ಒಂದು ಯುಕ್ತಿಯನ್ನು ಮಾವನ ಮುಂದಿಡುತ್ತಾನೆ, "ನಾವು ನಾಲ್ಕೂ ಜನರು ಸೇರಿ ಈ ಧನುಸ್ಸನ್ನು ಏಕೆ ಎತ್ತಿಬಿಡಬಾರದು?" ಆಗ, ಪ್ರಹಸ್ತ ಹೇಳುತ್ತಾನೆ, "ಹೇ ವೀರ ದಶಾನನನೆ! ಆಗ ಸೀತೆಯನ್ನು ವರಿಸುವವರು ಯಾರು?" ರಾವಣ ಹೇಳುತ್ತಾನೆ, "ನೀನು ಕೂಡಲೇ ರಥವನ್ನು ದ್ವಾರದಲ್ಲಿ ತಂದು ನಿಲ್ಲಿಸು." ಪ್ರಹಸ್ತ ನಗುನಗುತ್ತಲೇ ರಥವನ್ನು ಬಾಗಿಲಿನಲ್ಲಿ ತಂದು ನಿಲ್ಲಿಸಿದ. ರಾವಣ ಕೊನೆಯ ಬಾರಿ ತನ್ನೆಲ್ಲಾ ಶಕ್ತಿಯೊಂದಿಗೆ ಪ್ರಯತ್ನಿಸಿ ಸೋತು, ಆಕಾಶದತ್ತ ನೋಡಲು ತೊಡಗಿದ. ತನ್ನ ಹಿಂದೆ ಇಂದ್ರ ನಿಂತು ನೋಡುತ್ತಿರುವಂತೆ ಅವನಿಗೆ ಭಾಸವಾಯಿತು. ಬಿಲ್ಲನ್ನು ಬಿಸುಟು ತಕ್ಷಣ ಒಂದೇ ನೆಗೆತಕ್ಕೆ ರಥಕ್ಕೆ ಹಾರಿದ. ರಥ ಲಂಕೆಯತ್ತ ಧಾವಿಸಿತು. ಮಕ್ಕಳೆಲ್ಲರೂ ಕೈಚಪ್ಪಾಳೆ ತಟ್ಟುತ್ತ ತಮಾಷೆ ಮಾಡಿದರು.

### ದಶರಥನ ಮೋಸ–ವಿಶ್ವಾಮಿತ್ರನ ಕೋಪ

ಮಿಥಿಲೆಯಲ್ಲಿ ಋಷಿಗಳು ನಡೆಸುತ್ತಿದ್ದ ಯಜ್ಞಕ್ಕೆ ಮಾರೀಚಾದಿ ರಾಕ್ಷಸರ ಉಪಟಳವಿತ್ತು. ವಿಶ್ವಾಮಿತ್ರರು ರಾಮನೇ ರಾಕ್ಷಸರ ವಧೆಗೆ ತಕ್ಕ ವ್ಯಕ್ತಿಯೆಂದರಿತು ಅಯೋಧ್ಯೆಗೆ ಬರುತ್ತಾರೆ. ಅಲ್ಲಿ ದಶರಥನಿಂದ ಆತಿಥ್ಯ ಸ್ವೀಕರಿಸಿದ ಮೇಲೆ ತಮ್ಮ ಬೇಡಿಕೆಯನ್ನು ಅವನ ಮುಂದಿಡುತ್ತಾರೆ. ಆದರೆ, ರಾಮನನ್ನು ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ದಶರಥನು ಅವನನ್ನು ವಿಶ್ವಾಮಿತ್ರರೊಂದಿಗೆ ಕಳುಹಿಸಲು ಒಪ್ಪುವುದಿಲ್ಲ. ಹಲವಾರು ಕಾರಣಗಳನ್ನು ಕೊಡುತ್ತಾನೆ. ರಾಮನ ಬದಲಿಗೆ ತಾನೇ ಬರುವುದಾಗಿ ಹೇಳುತ್ತಾನೆ. ತನ್ನ ಮಹಾಸೈನ್ಯವನ್ನೇ ಅವರೊಂದಿಗೆ ಕಳುಹಿಸಿಕೊಡುತ್ತೇನೆ, ರಾಮ–ಲಕ್ಷ್ಮಣರಿನ್ನೂ ಹಸುಳೆಗಳು ಎನ್ನುತ್ತಾನೆ. ವಿಶ್ವಾಮಿತ್ರನಿಗೆ ಇವನ ಸಬೂಬುಗಳನ್ನು ಕೇಳಿ, ಕೋಪ ಬರುತ್ತದೆ. ರಾಮನನ್ನು ತನ್ನೊಂದಿಗೆ ಕಳುಹಿಸದಿದ್ದರೆ ಇಡೀ ಸೂರ್ಯವಂಶವನ್ನೇ ನಾಶ ಮಾಡುವುದಾಗಿ ಎಚ್ಚರಿಸುತ್ತಾನೆ. ಕೊನೆಗೆ ಬೇರೆ ದಾರಿಯಿಲ್ಲದೆ, ದಶರಥನು ಭರತ–ಶತ್ರುಘ್ನರನ್ನು ಕರೆದು ಮುನಿಗಳೊಂದಿಗೆ ಹೋಗಬೇಕೆಂದು ಅವರಿಗೆ ಆಜ್ಞೆ ನೀಡುತ್ತಾನೆ. ದಶರಥನ ಮೋಸವನ್ನು ಅರಿಯದೆ ವಿಶ್ವಾಮಿತ್ರನು ಅವರನ್ನೇ ರಾಮ–ಲಕ್ಷ್ಮಣರೆಂದುಕೊಂಡು ಕರೆದುಕೊಂಡು ಹೋಗುತ್ತಾನೆ.

ಮುಂದೆ ಮುಂದೆ ವಿಶ್ವಾಮಿತ್ರರು, ಅವರ ಹಿಂದೆ ಹಿಂದೆ ಭರತ–ಶತ್ರುಘ್ನರು ಹೋಗುತ್ತಿದ್ದರು. ಇಷ್ಟರಲ್ಲಿ ಸರಯೂ ನದಿಯ ತೀರಪ್ರದೇಶ ಸಮೀಪಿಸಿತು. ಆಗ ವಿಶ್ವಾಮಿತ್ರ ಅವರನ್ನು ಹೀಗೆ ಪ್ರಶ್ನಿಸುತ್ತಾನೆ: "ಹೇ ರಾಜಪುತ್ರರೆ, ಇಲ್ಲಿಂದ ಮುಂದಕ್ಕೆ ಎರಡು ದಾರಿಗಳು ಸಾಗುತ್ತವೆ – ಒಂದರಲ್ಲಿ ಸಾಗಿದರೆ ಮೂರು ದಿನಗಳಲ್ಲಿ ನಾವು ಆಶ್ರಮವನ್ನು ಸೇರಬಹುದು. ಇನ್ನೊಂದು ದಾರಿಯ ಮೂಲಕ ಹೋದರೆ ಮೂರು ಪ್ರಹರದಲ್ಲಿಯೇ ನಾವು ಸೇರಿಬಿಡಬಹುದು; ಆದರೆ, ಆ ಮಾರ್ಗದಲ್ಲಿ ತಾಟಕಿಯೆಂಬ ಭಯಂಕರ ರಾಕ್ಷಸಿಯೊಬ್ಬಳು ಇದ್ದಾಳೆ. ಅವಳು ಮುನಿಗಳನ್ನು ಅಟ್ಟಿಸಿಕೊಂಡು ಬಂದು ತಿಂದುಹಾಕುತ್ತಾಳೆ. ಹೇಳಿ, ನಾವು ಈಗ ಯಾವ ಮಾರ್ಗದಲ್ಲಿ ಹೋದರೆ ಒಳಿತು?" ಕೂಡಲೇ ಭರತ ಉತ್ತರಿಸುತ್ತಾನೆ, "ಮುನಿಗಳೇ ಕೇಳಿರಿ. ದುಷ್ಟರಿರುವ ದಾರಿಯಲ್ಲಿ ಹೋದರೆ ನಮಗೇನು ಪ್ರಯೋಜನ?" ಈ ಮಾತನ್ನು ಕೇಳಿದ ವಿಶ್ವಾಮಿತ್ರರು ಆಲೋಚಿಸತೊಡಗಿದರು, "ಒಬ್ಬ ರಾಕ್ಷಸಿಯ